R.A 18/2020
PW. 1

(ಇಂದು ದಿನಾಂಕ: 24-07-2023 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟಿ ಸವಾಲು : ಎದುರುದಾರ ಪರ ಶ್ರೀ D M N ವಕೀಲರಿಂದ :-**

ಈ ಮೇಲ್ಮನವಿಯನ್ನು 2018 ರಲ್ಲಿ ಸಲ್ಲಿಸಿರುತ್ತೇನೆ. ರಾ ಮೇಲ್ಮನವಿ ಸಲ್ಲಿಸಲು 7 ತಿಂಗಳು 15 ದಿನಗಳ ಕಾಲ ವಿಳಂಬನೆ ಆಗಿತ್ತು. ನಾನು ಗುತ್ತಿಗೆ ಕೆಲಸಕ್ಕಾಗಿ ಅಂಧ್ರಪ್ರದೇಶಕ್ಕಾಗಿ ಹೋಗಿದ್ದ ಕಾರಣ ಮೇಲ್ಮನವಿ ಸಲ್ಲಿಸಲು ವಿಳಂಬ ಅಗಿದೆ. ನಾನು ಕರ್ನೂಲ ಜಲ್ಲೆಯ ನಂದಿಕೊಟಕೂರ ಗ್ರಾಮಕ್ಕೆ ಹೋಗಿದ್ದೆನು. ನಾನು ಗುತ್ತಿಗೆ ಲೆಸನ್ಸನ್ನು ಹಾಜರು ಪಡಿಸಿಲ್ಲ ನಾನು ಬೇರೆಯವರ ಕಡೆಯಿಂದ ಗುತ್ತಿಗೆ ಕೆಲಸ ಪಡೆದುಕೊಂಡಿರುತ್ತೇನೆ. ಜೂನ್ 2019 ರಲ್ಲಿ ಗುತ್ತಿಗೆ ಕೆಲಸಕ್ಕೆ ಹೋಗಿ ನಾನು ಜನೇವರಿ 2020 ರಲ್ಲಿ ಮರಳಿ ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ವೃತ್ತಿಯನ್ನು ವ್ಯವಾಸಾಯ ಎಂದು ಬರೆಸಿರುತ್ತೇನೆ ಎಂದರೆ ಸರಿ. ಆದ ಆದ ನಂತರ 3-4 ತಿಂಗಳುಗಳ ನಂತರ ನಾನು ನಮ್ಮ ವಕೀಲರನ್ನು ಬೇಟಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಈ ವಿಷಯ ಬರೆಸಿಲ್ಲ ಎಂದರೆ ಸರಿ ಅಲ್ಲ. ನಾನು 7 ತಿಂಗಳು 15 ದಿನಗಳವರೆಗೆ ಆಂಧ್ರಪ್ರದೇಶಕ್ಕೆ ಗುತ್ತಿಗೆ ಕೆಲಸಕ್ಕೆ ಹೋಗಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಸದರಿ ಸುಳ್ಳು ಕಾರಣ ತೋರಿಸಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು